ಪಿ.ಡಬ್ಲೂಃ 1

ದಿನಾಂಕಃ **04.06.2025** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ನಂ.1 ಮತ್ತು 2 ರವರ ಪರವಾಗಿ Sri. JDD, ವಕೀಲರಿಂದ

8. ದಾವಾ ಆಸ್ತಿಯು ಪಕ್ಕಿರಪ್ಪನ ಹೆಸರಿನಲ್ಲಿ ಬರುತ್ತಿದ್ದು, ಅವರೊಬ್ಬರೆ ಸಾಗುವಳಿ ಮಾಡುತ್ತಾ ಬರುತ್ತಿದ್ದರು ಎಂದರೆ ಸರಿ. ಪಕ್ಕಿರಪ್ಪನು ಸಾಗುವಳಿ ಮಾಡುತ್ತಾ 2006 ರಲ್ಲಿ 1 ಮತ್ತು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ದಿಃ 02.06.2006 ರಂದು ದಾವಾ ಆಸ್ತಿಗೆ 1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಪತ್ರವು ನೊಂದಣಿ ಆಗಿರುತ್ತದೆ ಎಂದರೆ ಸರಿ. ಪಕ್ಕಿರಪ್ಪನು ದಾವಾ ಆಸ್ತಿಯನ್ನು ನಮ್ಮ ಭೂಮಿ ನಮ್ಮ ತೋಟ ಯೋಜನೆಯಡಿಯಲ್ಲಿ ಸರ್ಕಾರಕ್ಕೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಪಕ್ಕಿರಪ್ಪನು ಹೊಳೆ ಇಟಗಿ ಎಂ.ಜಿ. ಬ್ಯಾಂಕ ಮತ್ತು ತನ್ನ ಮನೆತನದ ಅಡಚಣೆಗಾಗಿ ದಾವಾ ಆಸ್ತಿಯನ್ನು ರೂ.3,73,200/- ಗಳಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ಸದರಿ ಹಣದಲ್ಲಿ ಬ್ಯಾಂಕಿಗೆ ನೀಡಬೇಕಾಗಿದ್ದ ಸಾಲದ ಹಣ ರೂ.63,800/- ಸರ್ಕಾರದವರು ಬ್ಯಾಂಕಿಗೆ ಪಾವತಿ ಮಾಡಿ ಉಳಿದ ಹಣ ಪಕ್ಕಿರಪ್ಪನಿಗೆ ನೀಡಿರುತ್ತಾರೆ ಎಂದರೆ ಸರಿ.

9. ನನ್ನ ತಂದೆ ಮರಣ ಹೊಂದಿದ ನಂತರ ಪಕ್ಕಿರಪ್ಪನೊಬ್ಬನೆ ದಾವಾ ಆಸ್ತಿಯ ಸಂಪೂರ್ಣ ಮಾಲೀಕನಾಗಿದ್ದು ಮಾರಾಟ ಮಾಡಿರುತ್ತಾನೆ

ಎಂದರೆ ಸರಿ. ಪಕ್ಕಿರಪ್ಪನು ಮಾರಾಟ ಮಾಡಿದ ನಂತರ ಅಥವಾ ಮಾರಾಟ ಮಾಡುವ ಪೂರ್ವದಲ್ಲಿ ಎಲ್ಲಿಯು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

10. ದಾವಾ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯರು ಖರೀದಿಸಿದ ನಂತರ ಫಲಾನುಭವಿಗಳಿಗೆ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸ್ವಾ ಧೀನದಲ್ಲಿ ಫಲಾನುಭವಿಗಳು ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ಫಲಾನುಭವಿಗಳು ದಾವಾ ಆಸ್ತಿಯ ಸ್ವಾ ಧಿನದಲ್ಲಿ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ದಾವೆಯನ್ನು ದಾಖಲಿಸಲು ಸರಿಯಾದ ಶುಲ್ಕ ಪಾವತಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಕ್ಕಿರಪ್ಪನ ಪ್ರತ್ಯೇಕ ಆಸ್ತಿಯಾಗಿದ್ದು ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮರಣದ ನಂತರ ದಾವಾ ಆಸ್ತಿಯು ಪಕ್ಕಿರಪ್ಪನ ಹೆಸರಿನಲ್ಲಿರುವ ವಿಚಾರ ಆಗಲೆ ತಿಳಿದಿತ್ತು ಎಂದರೆ ಸರಿ. ದಾವಾ ಆಸ್ತಿಯ ವಿಚಾರವಾಗಿ ಪಾವತಿ ಮಾಡಿರುವ ತೆರಿಗೆ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

12. ದಾವಾ ಆಸ್ತಿಯ ಮೋಸದ ಮಾರಾಟದ ಕುರಿತು ಪಕ್ಕಿರಪ್ಪನ ವಿರುದ್ಧ ಕ್ರಮ ತೆಗೆದುಕೊಂಡಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2016 ರಲ್ಲಿ ದೂರು ದಾಖಲಿಸಿದ್ದೆ ಎಂದು ನುಡಿಯುತ್ತಾರೆ. ಸದರಿ ದೂರಿನ ಪ್ರತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 2016 ರ ಕಾಲಕ್ಕೆ ಪಕ್ಕಿರಪ್ಪನ ಜೀವಂತವಾಗಿರಲಿಲ್ಲ ಎಂದರೆ ಸಾಕ್ಷಿಯು 2006 ರಲ್ಲಿ ಮರಣ

ಹೊಂದಿರುತ್ತಾನೆ ಎಂದು ನುಡಿಯುತ್ತಾರೆ. ಪಕ್ಕಿರಪ್ಪನ ವಿರುದ್ಧ ದೂರು ದಾಖಲಿಸಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

13. ಪಕ್ಕಿರಪ್ಪನ ಜೀವಂತ ಇರುವಾಗಲೇ ಕ್ರಮ ತೆಗೆದುಕೊಂಡಿರುತ್ತೇವೆ. ಪಕ್ಕಿರಪ್ಪನು ಜೀವಂತ ಇರುವಾಗಲೇ ಕ್ರಮ ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಮರಣ ಹೊಂದಿ ಸುಮಾರು 7 ವರ್ಷಗಳಾಗಿರಬಹುದು. ಪ್ರತಿವಾದಿ 9 ರಿಂದ 11 ರವರ ಪ್ರಸ್ತುತ ವಯಸ್ಸು 15 ರಿಂದ 18 ಇರಬಹುದು. 9 ರಿಂದ 11 ನೇ ಪ್ರತಿವಾದಿಗಳು ಈಗ ಪ್ರಾಪ್ತ ವಯಸ್ಕರಾಗಿರುತ್ತಾರೆ ಎಂದರೆ ಸರಿಯಲ್ಲ.

14. 3 ನೇ ಪ್ರತಿವಾದಿಯ ವಾರಸುದಾರರನ್ನು ದಾವೆಯಲ್ಲಿ ತಂದಿರುತ್ತೇನೆ. 3 ನೇ ಪ್ರತಿವಾದಿಯ ವಾರಸುದಾರರನ್ನು ದಾವೆಯಲ್ಲಿ ತಂದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗದೆ ಇರುವುದರಿಂದ ಯಾವುದೇ ಹಿಸ್ಸಾ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಕಾಲಕ್ಕೆ ಅವರು ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸುವ ಪಡಿತರ ಚೀಟಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾವು ಒಟ್ಟು ಕುಟುಂಬದಲ್ಲಿ ಇರದೆ ಇರುವ ಕಾರಣ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ.

15. ಸರ್ಕಾರದಿಂದ ಮಂಜೂರು ಮಾಡಿರುವ ಫಲಾನುಭವಿಗಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡದೆ ದಾವೆಯು

ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಸರ್ಕಾರದಿಂದ ದಾವಾ ಆಸ್ತಿಯ ಕಿಮ್ಮತ್ತು ನೀಡಿರುವ ಕಾರಣ ಪಕ್ಕಿರಪ್ಪನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನಗೆ ಯಾವುದೇ ಪ್ರತಿಫಲ ನೀಡಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರದೆ ಇರುವ ಕಾರಣ ಪ್ರತಿಫಲ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

16. ದಾವಾ ಆಸ್ತಿಯನ್ನು ಖರೀದಿಸಿದ ನಂತರ ಸರ್ಕಾರದ ಹೆಸರಿನಲ್ಲಿ ಮ್ಯೂಟೇಶನ ಸಂಖ್ಯೆ 66/2005-06 ರಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಖರೀದಿಸಿದ ನಂತರ ಸರ್ಕಾರದ ಸಂಬಂಧಿಸಿದ ಪ್ರಾಧಿಕಾರವೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಸ್ವಾ ಧೀನದಲ್ಲಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ವಿಚಾರವಾಗಿ ಈ ಮೊದಲೆ ಪ್ರಕರಣ ದಾಖಲಿಸಿದ್ದು ಆಗಲೇ ನನ್ನ ಗಮನಕ್ಕೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲದೆ ಇದ್ದರು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸರ್ಕಾರದ ಸ್ವಾ ಧೀನದಲ್ಲಿರುವ ಕಾರಣ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ

ವಿಚಾರಣೆಯ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

<u>(ನನ್ನ ಉಖ್ತುಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)</u>

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಶ್ಮೇಶ್ವರ